cheapest Daily 1 ಕಾಸು
ತಿಂಗಳಿಗೆ ವಾರಪತ್ರಿಕೆ ಸೇರಿ 4 ಆಣೆ

Regd. No. M 1299 SATYAVADI

ಸತ್ಯವಾದಿ

ಸಂಪುಟ 26] ಗುರುವಾರ 24—12—1942 [ಸಂಚಿಕೆ 80

ಉತ್ತಮ ಕಾಫೀ
ಸುವಾಸನೆ! ಅತ್ಯಂತ ರುಚಿ!
ಯಾವಾಗಲೂ ಲಕ್ಷ್ಮೀನಾರಾಯಣ ಕಾಫೀಪುಡಿಯನ್ನೇ ಉಪಯೋಗಿಸಿ.
ಲಕ್ಷ್ಮೀನಾರಾಯಣ ಕಾಫೀವರ್ಕ್ಸ್!
ಕೊಳ್ಳೇಗಾಲ

87000 ಟನ್ ಬೆಳ್ಳಿ ಹೊರಗೆ ಬರುವುದು

ಯುದ್ಧದ ವರ್ತಮಾನ

ಡಾನ್‌ನಲ್ಲಿ ರಷ್ಯನರು ಮುನ್ನುಗ್ಗುತ್ತಾ, ಜರ್ಮನರನ್ನು ಹೆಚ್ಚುಹೆಚ್ಚಾಗಿ ಸೆರೆ ಹಿಡಿಯುತ್ತಿದ್ದಾರೆ.

ಲೆಸೆವ್ ಹತ್ತಿರ ಜರ್ಮನರು ತೋರಿಸಿದ ಪ್ರತಿಭಟನೆಯು ನಿರುಪಯೋಗವಾಯಿತು.

. ಟ್ರಿಪೋಲಿಯ ಹತ್ತಿರ ಮಿತ್ರಸಂಡಲಿಯವರು ಮುನ್ನುಗ್ಗುತ್ತಿದ್ದಾರೆ. ಶತ್ರು ರೋಮೆಲ್ಲಿನ ಸೈನ್ಯವನ್ನು ಹುಡುಕುತ್ತಿದ್ದಾರೆ.

ಕಿಸ್ಕಾ ಮೇಲೆ ಅಮೇರಿಕಾ ಬಾಂಬರುಗಳು ನಡೆಸಿದವು.

ಪೋರ್ಚುಗಲ್ ಸ್ಪೇನುಗಳ ಮಧ್ಯೆ ಸಂಪೂರ್ಣ ಒಪ್ಪಂದವಾಗಿರುವುದಾಗಿ ತಿಳಿಯ ಬಂದಿದೆ..

ಸ್ವೀಡನ್ ಎಚ್ಚರಿಕೆಗೊಂಡು, ತನ್ನ ಮಿಲಿಟರಿ ಸಿದ್ಧತೆಗಳನ್ನು ಸರಿಪಡಿಸಿಕೊಳ್ಳಲು ಪ್ರಾರಂಭಿಸಿದೆ.

ಅಕ್ಯಾಬ್ ಭಾಗದಲ್ಲಿ ಆರ್. ಎ. ಎಫ್ ನವರು ದಾಳಿ ನಡೆಸಿ, ಶತ್ರು ವಿಮಾನ ನಿಲ್ದಾಣವನ್ನು ಹಾಳುಮಾಡಿದ್ದಾರೆ.

ಟ್ಯೂನೀಷಿಯಾದಲ್ಲಿ ಮಿತ್ರ ಬಾಂಬರ್ ವಿಮಾನಗಳು ಬಹಳ ಚಟುವಟಿಕೆಯಿಂದಿವೆ.

ನಿನ್ನೆ ಬೆಂಗಳೂರಿನಲ್ಲಿ ದಿವಾನರ ಜೇಂಬರಿನಲ್ಲಿ ಮಂತ್ರಿಮಂಡಲದ ಸಭೆ ನಡೆಯಿತೆಂದು ತಿಳಿಯಬಂದಿದೆ.

ಯುದ್ಧಕ್ಕೆ ಅವಶ್ಯಕವಿಲ್ಲದ ಪುತ್ತು ಈಗ ಖಜಾನೆಗೆ ಸೇರಿಲ್ಲದ ಸರಕಾರದ ಬೆಳ್ಳಿಯನ್ನು ಉಪಯೋಗಕ್ಕಾಗಿ ಕೊಡಲು ಅಮೇರಿಕಾದ ಹೆಚ್ಚು ಬೆಳ್ಳಿ ತಯಾರಿಸುವ ಸಂಸ್ಥಾವರಗಳ 5 ಮಂದಿ ಸೆನೇಟರುವರು ಒಪ್ಪಿರುತಾರೆ. ಹೀಗೆ ಮಾಡುವುದರಿಂದ ಆಧಾರಪಡಿಸಲ್ಪಡದೆ ಖಜಾನೆಯಲ್ಲಿರುವ 47000 ಟನ್ ಬೆಳ್ಳಿಯು ಯುದ್ಧ ಸಾಮಗ್ರಿ ತಯಾರಿಕೆ ಬೋರ್ಡಿಗೆ ವಶಪಡಿಸಲಾಗುವುದು ಮತ್ತು ಆಧಾರಪಡಿಸಲ್ಪಟ್ಟಿರುವ 40000 ಟನ್ ಬೆಳ್ಳಿಯೂ ಇತರ ಕೆಲಸಕ್ಕಾಗಿ ಬೋರ್ಡಿಗೆ ಕೊಡಲಾಗುವುದು ತಾಂಬ್ರದ ಒದಲು ಇದು ಬಹುಮಟ್ಟಿಗೆ ಉಪಯೋಗಿಸಲ್ಪಡಬಹುದು.

ಉಪಯೋಗಕ್ಕೆ ಬಾರದ ವಸ್ತುಗಳನ್ನು ಬಿಸಾಡಬಾರದು

ಈಗಾಗಲೇ ಬ್ರಿಟನ್ನಿನಲ್ಲಿ 6 ಲಕ್ಷ ಟನ್‌ಗಳಷ್ಟು ಹಂಕುಕಾಗದವನ್ನು ಸಂಗ್ರಹಿಸಿ ಅದರಿಂದ ಪುನಃ ಹೊಸದಾಗಿ ಕಾಗದವನ್ನು ಮಾಡಲಾಗಿದೆ.

ಅಮೇರಿಕದಲ್ಲಿ ಉತ್ಪತ್ತಿ

ಅಮೇರಿಕದಲ್ಲಿ ಸಂಗ್ರಾಮ ವಸ್ತುಗಳ ನಿರ್ಮಾಣಗಳು ಹೆಚ್ಚುತ್ತಿರುವುದಾಗಿ ಸೂಚಿಸಿದ್ದಾರೆ. 'ಇರಿಗೇಟ್' ಉಕ್ಕು ಮತ್ತು ಅಲ್ಯೂಮಿನಿಯಂ ಇವುಗಳ ಉತ್ಪತ್ತಿಯೂ ಕೂಡ ಬಹಳ ಹೆಚ್ಚಾಗಿವೆಯೆಂದು ಅವರು ಸೂಚಿಸಿದ್ದಾರೆ.

ಸಂಜಾಗಾಂಜಿನಲ್ಲಿ 20 ನೇ ತಾರೀಖು ನಡೆದ ವಾರದ ಸಂತೆಯಲ್ಲಿ ಬಂದಿದ್ದ ನಾನಾವಸ್ತು ಸರಂಜಾಮೆಲ್ಲ ಲೂಟಿ ಮಾಡಲ್ಪಟ್ಟಿತೆಂದೂ ಇದು ಸುಮಾರು 25000 ರೂಪಾಯಿಯೆಂದೂ ತಿಳಿಯಬಂದಿದೆ.

ತಾಜಾ ಸಮಾಚಾರ

ಪ್ರಜೆಗಳೆಲ್ಲರಿಗೂ ಸ್ವಪರಿಪಾಲನೆಯು ಏರ್ಪಾಡಾಗಬೇಕೆಂದೂ, ಪೂರ್ವ ಪಶ್ಚಿಮ ಮಗಳೆಂಬ ವ್ಯತ್ಯಾಸಗಳಿರಕೂಡದೆಂದೂ ಈಚೆಗೆ ಅಮೆರಿಕದ ಪ್ರಮುಖರು ಪ್ರೆಸಿಡೆಂಟ್ ರೂಜ್‌ವೆಲ್ಟರಿಗೆ ತಿಳಿಸಿದರು

ಅಮೆರಿಕದಿಂದ ಚೈನಾಕ್ಕೂ ಚೈನಾದಿಂದ ಅಮೆರಿಕಕ್ಕೂ ರೇಡಿಯೋ ಫೋಟೋ ಸರ್ವಿಸ್ಸು ಏರ್ಪಾಡಾಗಿದೆ.

ಮದರಾಸಿನಲ್ಲಿ 21 ನೇ ತಾರೀಖಿನ ದಿವಸ ಮುಸ್ಲಿಂ ಲೀಗಿನ ಅಧ್ಯಕ್ಷರಾದ ಎ.॥ ಜಿನ್ನಾರವರ 67 ನೇ ವರ್ಧಂತ್ಯುತ್ಸವವು ಸೇರವೇರಿಸಲಾಯಿತು. ಈ ಸಮಾರಂಭದಲ್ಲಿ ಅಧ್ಯಕ್ಷಸ್ಥಾನವನ್ನಲಂಕರಿಸಿದ್ದ ಮಿ॥ ಅಬುಲ್ ಖಾರ್ ಖಾನರು ಇಂಡಿಯಾಕ್ಕೆ ಕ್ಷಿಪ್ರದಲ್ಲೇ ಸ್ವಾತಂತ್ರ್ಯ ಲಭಿಸಬೇಕಾದರೆ, ಕಾಂಗ್ರೆಸ್ ಪಾಕಿಸ್ತಾನವನ್ನು ಅಂಗೀಕರಿಸಬೇಕು, ಎಂದು ತಿಳಿಸಿದರು.

ಅರಕಾನ ಮೇಲಿನ ಅಧಿಕಾರ ಮಾತ್ರದಿಂದಲೇ ಬರ್ಮಾದ ಮೇಲೆ ಮಿತ್ರರ ಅಧಿಕಾರ ಲಭಿಸಿದಂತಾಗಲಿಲ್ಲವೆಂದು ಜೇಲೀ ಟೆಲಿಗ್ರಾಫ್ ಪತ್ರಿಕೆಗೆ ಒಬ್ಬ ಬರ್ಮಾ ಬಾತ್ಮಿದಾರನು ಬರೆದಿರುವನು.

ಮೊಸ್ಲೆ ರೈಲ್ವೆ ಕಲ್ಕತ್ತಾದಲ್ಲಿ ಒಂದು ಟ್ರಾಂಕಾರಿಗೆ ಬೆಂಕಿ ಇಡುವ ಪ್ರಯತ್ನ ನಡೆಯಿತು

ಮೂರತ್ತಿನ ಹಳ್ಳಿಗಳ ಮೇಲೆ ರೂ. 15,900 ಪುಂಡು ಕಂದಾಯ ವಿಧಿಸಲಾಗಿದೆ.

ಪಾ ತಾ ರ್ ತ ರ ಂ ಗ

ಹೋದ ಒಂದು ತಿಂಗಳಲ್ಲಿ ಅಮೆರಿಕಾದವರು ಲೆಂಡ್ ಆಂಡಲೀಜ್ ಪ್ರಕಾರ ಇತರ ದೇಶಗಳಿಗೆ 35,000000000 ರೂ ಪಾಯಿಗಳ ಸಾಮಾನುಗಳನ್ನು ಕೊಟ್ಟಿರುತ್ತಾರೆ.

ಮದರಾಸು ಗ್ಯೂನರವರ ಮಗಳ ವಿವಾಹವು ನಿನ್ನೆ ದಿನಸ ವಿ|| ಆಂಧ್ರ ನಿಪಾಲ್ ಎಂಬುವರೊಡನೆ ಮದರಾಸಿನ ಮೈಲಾಪುರ್ ಚರ್ಚಿನಲ್ಲಿ ನೆರವೇರಿತು. ಸತ್ಕಾರ ಸಮಾರಂಭಕ್ಕೆ 700 ಜನಕ್ಕೆ ಮೇಲ್ಪಟ್ಟು ಆತಿಥಿಗಳು ಹಾಜರಿದ್ದರು.

ರಾಜಸ್ತಾಹಿ ಕಡೆಯಿಂದ ಅಕ್ಕಿ ರಫ್ತಾಗದಂತೆ ಸರಕಾರವು ಕುರಿತು ಆಜ್ಞೆ ಹೊರಡಿಸಿರುವುದಾಗಿ ಕಲ್ಕತ್ತಾದಿಂದ ಬಂದಿರುವ ವರ್ತಮಾನ.

ಅಮೇರಿಕಾದಲ್ಲಿ 1943 ರಲ್ಲಿ 624,304,000 ಬುಷಲ್ ಗೋಧಿಯು ಬೆಳೆಯಾಗುವುದೆಂದು ಅಂದಾಜಾಗಿದೆ.

ಯುಕರೇನಿನಲ್ಲಿ 20,00000 ರಷ್ಯನರನ್ನು ನಾಜಿಗಳು ಕೊಂದಿರುತ್ತಾರಂತೆ.

ಇಂಡಿಯಾದಲ್ಲಿ 264 ಟ್ಟ ಅಕ್ಕಿ ಬೆಳೆಯುವುದು.

ನಿನ್ನೇ ಸೂರತ್ತಿನಲ್ಲಿ ಬೆಂಕಿ ಕಾಣಿಸಿಕೊಂಡಿತೆಂದೂ, ಕಾರಣ ಗೊತ್ತಾಗಲಿಲ್ಲವೆಂದೂ ತಿಳಿಯಬಂದಿದೆ

ಇನ್ನು ಒಂದು ತಿಂಗಳ ಪರ್ಯಂತರ ಬೊಂಬಾಯಿನಲ್ಲಿ ಯಾರೂ ಆಯುಧಗಳನ್ನು ಹಿಡಿದುಕೊಂಡು ಬೀದಿಯಲ್ಲಿ ಹೋಗಕೂಡದು.

ಸುಮಾತ್ರಾ ದ್ವೀಪದ ಒಂದು ಸಣ್ಣ ದ್ವೀಪದ ಮೇಲೆ ಆರ್. ಎ. ಎಫ್. ವಿಮಾನಗಳು ಧಾಳಿಮಾಡಿದವು.

Edited, Printed & publishec by M. S. Krishna Rao, at the Satyavadi P r e s s, Chamaraja Agrahar, Mysore.

ಪರದೆಯಿಂದ ವಿಮಾನಕ್ಕೆ

ಪ್ರಸಿದ್ಧ ಅಮೇರಿಕಾ ನಟಿ ಒಪ್ರೊಸ್ ಕಾಒಟ್ ವಿಮಾನಕ್ಕೆ ಸೇರಿರುವಳು. ಮುಂದೆ ಅವಳು ಪರದೆಯ ಮೇಲಿಂದ ಅಂತರಕ್ಷದಲ್ಲಿಯೇ ಇರುವಳೆ ?

ಚುಟ್ಟಾ ಹಂಚಿಕೆ !

ಈ ಮೂರು ವರ್ಷದಲ್ಲಿ ನೌಕಾ ಇಲಾಖೆಯವರಿಗೆ 70000000, ಸೈನ್ಯದವರಿಗೆ 83000 000, ಆರ್ ಎ. ಎಫ್ ರಿಗೆ 17000000 ಗಾಯಗೊಂಡವರಿಗೆ 200000 ಈ ಪ್ರಕಾರ ಆಂಗ್ಲೇಯರು ಚುಟ್ಟಾಗಳನ್ನು ಹಂಚಿರುತ್ತಾರೆ. ಇವರಷ್ಟೂ ಏತಕ್ಕೆ ವಿಕಾಲದಲ್ಲಿ ಸೇದಬೇಕಾದರಾಗಿತ್ತು. ಇಷ್ಟರ ಹೊಗೆಯೂ ಏಕಕಾಲದಲ್ಲಿ ಎದ್ದಿದ್ದರೆ ಹಿಟ್ಲರ್ ಒಂದೇ ಗಳಿಗೆಯಲ್ಲಿ ಹಾರಿ ಹೋಗುತ್ತಿದ್ದನಲ್ಲವೆ ?

ಇಟಲಿ ಜರ್ಮನಿಯ ಬಾಯಿಗೆ!

ಇಟಲಿ ದೇಶದ ಸಂಪತ್ತನ್ನು ಲಿಖ್ವಾ ಹಾಕಲು ಮತ್ತು ಇಟಲಿಯು ಮಿತ್ರಮಂಡಲಿಯಿಂದ ಮುತ್ಕಲ್ಪಟ್ಟರೆ, ಏನೇನು ಸಂಪತ್ತನ್ನು ಜರ್ಮನಿಗೆ ಸಾಗಿಸತಕ್ಕದ್ದೆಂದು ನಿರ್ಣಯಿಸಲು ಡಾ|| ಸ್ಟಾಕ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಏರ್ಪಾಡಾಗಿದೆಯಂತೆ!

ರೂಸ್‌ವೆಲ್ಟ್ ಯುದ್ಧ

ಸೆವನ್ ಹೆಡನ್ ಎಂಬ ಪ್ರಸಿದ್ಧ ಗ್ರಂಥಕರ್ತನು ಈಗ ಬರೆದಿರುವ ಪುಸ್ತಕದಲ್ಲಿ ಈಗಿನ ಯುದ್ಧವು 'ರೂಸೆವೆಲ್ಟ್ ಯುದ್ಧ' ಎಂದಿರುವನು,

ನಟನಟಿಗಳ ಗ್ರಹಚಾರ

ಅಮೇರಿಕಾದಲ್ಲಿ ಇನ್ನು ಮುಂದೆ ಯಾವ ಸಿನಿಮಾ ನಟನಟಿಯರಿಗೆ ವರ್ಷಕ್ಕೆ ಎಂಭತ್ತು ಸಾವಿರ ರೂಪಾಯಿಗಿಂತ ಹೆಚ್ಚಾಗಿ ಸಂಬಳ ಕೊಡುವುದಿಲ್ಲವಂತೆ ಅಂದರೆ ತಿಂಗಳಿಗೆ ರೂಪಾಯಿ 6666:10-4 ಆದ ಹಾಗಾಯಿತು. ಯುದ್ಧಕಾಲ, ಏನು ಮಾಡುವುದು ?

ಕಲ್ಕತ್ತಾ ಮೇಲೆ ಮತ್ತೊಮ್ಮೆ ದಾಳಿ

ಮಂಗಳವಾರ ಬುಧವಾರಗಳ ಮಧ್ಯರಾತ್ರಿಯಲ್ಲಿ ಕಲ್ಕತ್ತಾ ಮೇಲೆ ಮತ್ತೊಮ್ಮೆ ಅಂದರೆ ಮೂರನೇ ಸಾರಿ, ಜಪಾನು ವಿಮಾನಗಳ ಚಿಕ್ಕದೊಂದು ಗುಂಪು ಒಂದು ಕೆಲವು ಬಾಂಬುಗಳನ್ನು ಹಾಕಿದವೆಂದೂ, ಸಾವುನೋವು ಮತ್ತು ನಷ್ಟವು ಅತ್ಯಲ್ಪವಾಗಿದೆಯೆಂದು ತಿಳಿಯಬಂದಿದೆ. ಫೈಟರ್ ವಿಮಾನಗಳು ಶತ್ರು ವಿಮಾನಗಳನ್ನು ಎದುರಿಸಿದವು.

ಚಿಲ್ಲರೆ ಕಳ್ಳತನವೇ ?

ಬೆಳಗಾವಿನಲ್ಲಿ ಒಬ್ಬ ಪ್ರಸಿದ್ಧ ವರ್ತಕನು ರೂ, 476 ಮೌಲ್ಯದ ಚಿಲ್ಲರೆ ನಾಣ್ಯವನ್ನು ಶೇಖರಿಸಿಟ್ಟುಕೊಂಡಿದ್ದನು. ಪೋಲೀಸರು ಪತ್ತೇ ಮಾಡಿ ವಶಪಡಿಸಿಕೊಂಡಿರುವರು.

ಅಪೆರ .... ಮಾಯಾಜ್ಯೋತಿ

ನಿನ್ನ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಎಡುರುನೋಡಿ

— ಹೆಚ್ ಆರ್. ಜಿ. ಸಿ. ಯವರ —

ಶ್ರೀ ಪಿಕ್ಚರ್ಸ್

ಗಾಂಧಿಸ್ಕ್ವೇರ್, ಮೈಸೂರು ಇವರ ಸಂಗೀತರತ್ನ ಅಸ್ಥಾನ ವಿದ್ವಾನ್ ಟಿ. ಚೌಡಯ್ಯನವರು, ಕಲ್ಚರ್ಡ್ ಕಮೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ, or (VIOLINIST)

ಎಂಬ ಕನ್ನಡಸಾಮಾಜಿಕ ಚಿತ್ರ.

— ಸ್ಟೂಡಿಯೊ —

ಸೆಂಟ್ರಲ್ ಸ್ಟೂಡಿಯೋಸ್ ಲಿಮಿಟೆಡ್

ಕೊಯಂಬತ್ತೂರು.